ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 17-10-2003.

# *ಈ ವರ್ಷ ಸಂತುಷ್ಟಮಣಿಯಾಗಿ ಸದಾ ಸಂತುಷ್ಟವಾಗಿ ಇರಬೇಕು ಮತ್ತು ಸರ್ವರನ್ನು ಸಂತುಷ್ಟ ಮಾಡಬೇಕು.*

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಮನೋಭಿರಾಮನಾದ (ಹೃದಯ ರಾಮನು) ಬಾಪ್‌ದಾದಾ ತನ್ನ ನಾಲ್ಕೂ ಕಡೆ ಇರುವಂತಹ ಅರ್ಥಾತ್ ಎದುರಿಗೆ ಇರುವವರನ್ನು ಮತ್ತು ದೂರವಾಗಿ ಇರುತ್ತಲೂ ಸಮೀಪವಿರುವ ಪ್ರತಿಯೊಬ್ಬ ರಾಜಕುಮಾರರನ್ನು, ಅತಿ ಪ್ರಿಯವಾದ ಮಕ್ಕಳನ್ನು ನೋಡಿ ಖುಷಿಪಡುತ್ತಿದ್ದಾರೆ.  ಪ್ರತಿಯೊಬ್ಬ ಮಗು ರಾಜನಾಗಿದ್ದಾನೆ. ಆದ್ದರಿಂದ ರಾಜಕುಮಾರರು. ಪರಮಾತ್ಮನ ಪ್ರೀತಿ, ಪಾಲನೆ ವಿಶ್ವದಲ್ಲಿ ಬಹಳ ಸ್ವಲ್ಪ ಆತ್ಮರಿಗೆ ಮಾತ್ರವೇ ಲಭಿಸುತ್ತದೆ. ನೀವೆಲ್ಲರೂ ಪರಮಾತ್ಮನ ಪ್ರೀತಿ ಮತ್ತು ಪಾಲನೆಗೆ ಅಧಿಕಾರಿಗಳು.  ಪ್ರಪಂಚದಲ್ಲಿರುವ ಆತ್ಮರು ಓ ಭಗವಂತನೇ... ಬಾ ಎಂದು ಕರೆಯುತ್ತಿದ್ದಾರೆ ಆದರೆ ನೀವೆಲ್ಲರೂ ಪರಮಾತ್ಮನ ಪ್ರೀತಿಯನ್ನು ಅನುಭವ ಮಾಡಿಕೊಳ್ಳುತ್ತಿದ್ದೀರಿ. ಪರಮಾತ್ಮನ ಪಾಲನೆಯಿಂದ ಪಾಲಿಸಲ್ಪಡುತ್ತಿದ್ದೀರಿ.  ಹೀಗೆ ನಿಮ್ಮ ಭಾಗ್ಯವನ್ನು ಅನುಭವ ಮಾಡಿಕೊಳ್ಳುತ್ತಿದ್ದೀರಿ. ಮಾಡಿಕೊಳ್ಳುತ್ತಿದ್ದೀರಾ? ಬಾಪ್‌ದಾದಾ ಮಕ್ಕಳೆಲ್ಲರನ್ನು ಡಬಲ್ ರಾಜ್ಯಾಧಿಕಾರಿಗಳ ರೂಪದಲ್ಲಿ ನೋಡುತ್ತಿದ್ದಾರೆ. ಈಗಲೂ ಸ್ವರಾಜ್ಯಾಧಿಕಾರಿಗಳು ಮತ್ತು ಭವಿಷ್ಯ ರಾಜ್ಯವೂ ನಿಮ್ಮ ಜನ್ಮ ಸಿದ್ಧ ಅಧಿಕಾರವಾಗಿದೆ ಆದ್ದರಿಂದ ಡಬಲ್ ರಾಜರು. ಎಲ್ಲರೂ ರಾಜರಲ್ಲವೇ? ಪ್ರಜೆಗಳಲ್ಲ ತಾನೇ! ಎಲ್ಲರೂ ರಾಜ ಯೋಗಿಗಳೇನಾ ಅಥವಾ ಯಾರಾದರೂ ಪ್ರಜಾ ಯೋಗಿಗಳು ಇದ್ದೀರಾ? ಯಾರಾದರೂ ಪ್ರಜಾ ಯೋಗಿಗಳು ಇದ್ದೀರಾ? ಹಿಂದೆ ಕುಳಿತಿರುವವರು ರಾಜಯೋಗಿಗಳೇನಾ?

ಯಾರೂ ಪ್ರಜಾ ಯೋಗಿಗಳು ಅಲ್ಲ ತಾನೇ? ಪಕ್ಕಾ ಆಗಿದ್ದೀರಾ? ರಾಜ್ಯಾಧಿಕಾರಿ ಅರ್ಥಾತ್ ಸರ್ವ ಸ್ಥೂಲ ಸೂಕ್ಷ್ಮ ಕರ್ಮೇಂದ್ರಿಯಗಳಿಗೆ ಅಧಿಕಾರಿ ಏಕೆಂದರೆ ಸ್ವರಾಜ್ಯವಲ್ಲವೇ! ಆದ್ದರಿಂದ ಆಗಾಗ ರಾಜರಾಗುತ್ತಿದ್ದೀರಾ ಅಥವಾ ಸದಾ ರಾಜರಾಗುತ್ತಿದ್ದೀರಾ ಮುಖ್ಯವಾದ ನಿಮ್ಮ ಮನಸ್ಸು, ಬುದ್ಧಿ, ಸಂಸ್ಕಾರಗಳಿಗೂ ಸಹ ಅಧಿಕಾರಿಯಾಗಿರುತ್ತಿದ್ದೀರಾ? ಸ್ವರಾಜ್ಯವೆಂಬುವುದು ಸದಾ ಇರುತ್ತದೆಯೇ ಅಥವಾ ಒಂದು ದಿನವಿದ್ದು ಎರಡನೆಯ ದಿನ ಇರುತ್ತಿಲ್ಲವೇ? ರಾಜ್ಯ ಅರ್ಥಾತ್ ಸದಾ ಇರುತ್ತದೆಯಲ್ಲವೇ! ಆದ್ದರಿಂದ ಸದಾ ರಾಜ್ಯಾಧಿಕಾರಿ ಅರ್ಥಾತ್ ಮನಸ್ಸು, ಬುದ್ಧಿ, ಸಂಸ್ಕಾರಗಳ ಮೇಲೆ ಅಧಿಕಾರವಿರಬೇಕು. ಸದಾ ಇದೆಯೇ? ಸದಾ ಇದೆಯೇ ಎಂದು ಕೇಳಿದರೆ ಇದೆ ಎಂದು ಹೇಳುತ್ತಿಲ್ಲ. ಆಗಾಗ ಮನಸ್ಸು ಮಾಲಿಕ(ಯಜಮಾನಿ) ಆಗುತ್ತಿದೆಯೇ? ಸದಾ ಸ್ವರಾಜ್ಯಾಧಿಕಾರಿಯಿಂದ ವಿಶ್ವರಾಜ್ಯಾಧಿಕಾರಿ ಆಗುತ್ತಿರಿ.

ಸದಾ ಪರೀಶೀಲನೆ ಮಾಡಿಕೊಳ್ಳಿರಿ - ಎಷ್ಟು ಸಮಯ, ಎಷ್ಟು ಶಕ್ತಿಯಿಂದ, ನಿಮ್ಮ ಕಾರ್ಮೇಂದ್ರಿಯಗಳ ಮೇಲೆ ಮನಸ್ಸು, ಬುದ್ಧಿ, ಸಂಸ್ಕಾರಗಳ ಮೇಲೆ ಈಗ ಅಧಿಕಾರಿ ಆಗುತ್ತಿರೋ ಅಷ್ಟೇ ಭವಿಷ್ಯದಲ್ಲಿ ರಾಜ್ಯಾಧಿಕಾರವು ಲಭಿಸುತ್ತದೆ. ಒಂದು ವೇಳೆ ಈಗ ಪರಮಾತ್ಮನ ಪಾಲನೆ, ಪರಮಾತ್ಮನ ವಿದ್ಯೆ, ಪರಮಾತ್ಮನ ಶ್ರೀಮತದ ಆಧಾರವಾಗಿ ಈ ಸಂಗಮ ಯುಗದ ಒಂದು ಜನ್ಮದಲ್ಲಿ ಸದಾ ಅಧಿಕಾರಿಯಾಗದಿದ್ದರೆ, 21 ಜನ್ಮಗಳು ಯಾವ ರೀತಿಯಾಗಿ ರಾಜ್ಯಾಧಿಕಾರಿಯಾಗುತ್ತೀರಿ? ಲೆಕ್ಕವಿದೆಯಲ್ಲವೇ, ಈ ಸಮಯದ ಸ್ವರಾಜ್ಯ ಅರ್ಥಾತ್ ಸ್ವಯಂಗೆ ರಾಜನಾಗುವುದರಿಂದಲೇ 21 ಜನ್ಮಗಳ ಗ್ಯಾರಂಟಿ ರಾಜರಾಗುತ್ತೀರಿ. ನಾನು ಯಾರು ಮತ್ತು ಹೇಗಾಗುತ್ತೇನೆ ಹೀಗೆ ವರ್ತಮಾನದ ಅಧಿಕಾರದಿಂದ ನಿಮ್ಮ ಭವಿಷ್ಯವನ್ನು ಸ್ವಯಂ ನೀವೇ ತಿಳಿಯಬಹುದು.

ಯೋಚಿಸಿರಿ -ವಿಶೇಷಾತ್ಮರಾದ ನಿಮ್ಮ ಆದಿ, ಅನಾದಿ ಪರ್ಸನಾಲಿಟಿ ಮತ್ತು ರಾಯಲ್ಟಿ ಎಷ್ಟು ಶ್ರೇಷ್ಠವಾದದ್ದು. ಅನಾದಿ ರೂಪದಲ್ಲಿಯೂ ಆತ್ಮರಾದ ನೀವು ಪರಧಾಮದಲ್ಲಿರುವಾಗಲೂ ನೀವು ವಿಶೇಷ ಹೊಳಪಿನಿಂದ ಹೊಳೆಯುತ್ತಾ ಇರುತ್ತೀರಿ. ಆ ಹೊಳಪಿನ ಪರ್ಸನಾಲಿಟಿ ಮತ್ತು ರಾಯಲ್ಟಿ ಎಷ್ಟು ಶ್ರೇಷ್ಠವಾದದ್ದು. ಅದು ನಿಮಗೆ ಕಾಣಿಸುತ್ತಿದೆಯೇ ಪರಂಧಾಮದಲ್ಲಿ ತಂದೆಯ ಜೊತೆ ಆತ್ಮದ ರೂಪದಲ್ಲಿಯೂ ಇರುತ್ತೀರಿ ಮತ್ತು ಸಮೀಪವಾಗಿಯೂ ಇರುತ್ತೀರಿ. ಆಕಾಶದಲ್ಲಿಯೂ ಸ್ವಲ್ಪ ಸ್ವಲ್ಪ ನಕ್ಷತ್ರಗಳು ಬಹಳಷ್ಟು ಹೊಳೆಯುತ್ತಾ ಕಾಣಿಸುತ್ತವೆ ಅಲ್ಲವೇ! ಅದೇ ರೀತಿಯಾಗಿ ನೀವು ಸಹ ಪರಮಧಾಮದಲ್ಲಿ ವಿಶೇಷವಾಗಿ ತಂದೆಯ ಜೊತೆ ಮತ್ತು ವಿಶೇಷವಾಗಿ ಹೊಳೆಯುವ ನಕ್ಷತ್ರಗಳಾಗಿ ಇರುತ್ತೀರಿ. ಪರಂಧಾಮದಲ್ಲಿಯೂ ನೀವು ತಂದೆಗೆ ಸಮೀಪವಾಗಿ ಇರುತ್ತೀರಿ ಮತ್ತು ಸತ್ಯಯುಗದಲ್ಲಿಯೂ ದೇವಾತ್ಮರಾದ ನಿಮ್ಮ ಪರ್ಸನಾಲಿಟಿ (ವ್ಯಕ್ತಿತ್ವ) ಮತ್ತು ರಾಯಲ್ಟಿ (ಘನತೆ) ಎಷ್ಟು ಶ್ರೇಷ್ಠವಾದದ್ದು. ಇಡೀ ಕಲ್ಪವೆಲ್ಲಾ ಸುತ್ತಿ ಬನ್ನಿರಿ. ಧರ್ಮಾತ್ಮರು, ಮಹಾತ್ಮರು, ಧರ್ಮಪಿತರು, ನಟರು ಅನೇಕ ಜನರು ಬಂದಿದ್ದಾರೆ. ಸತ್ಯಯುಗದಲ್ಲಿ ದೇವಾತ್ಮರಾದ ನಿಮಗಿರುವಷ್ಟು ವ್ಯಕ್ತಿತ್ವ ಅವರಲ್ಲಿ ಯಾರಿಗಾದರೂ ಇದೆಯೇ? ನಿಮ್ಮ ದೇವತಾ ಸ್ವರೂಪ ಎದುರಿಗೆ ಬರುತ್ತಿದೆಯೇ? ಬರುತ್ತಿದೆಯೇ ಅಥವಾ ನಾವು ಆಗುತ್ತೇವೆಯೋ ಇಲ್ಲವೋ ತಿಳಿದಿಲ್ಲ ಎಂದುಕೊಳ್ಳುತ್ತಿದ್ದೀರಾ? ಪಕ್ಕಾ ಅಲ್ಲವೇ? ನಿಮ್ಮ ದೇವತಾ ಸ್ವರೂಪವನ್ನು ಎದುರಿಗೆ ತಂದುಕೊಳ್ಳಿರಿ ಮತ್ತು ನೋಡಿಕೊಳ್ಳಿ. ನಿಮ್ಮ ಪರ್ಸನಾಲಿಟಿ ಎದುರಿಗೆ ಬಂದಿದೆಯೇ? ಎಷ್ಟು ಶ್ರೇಷ್ಠ ಸ್ಥಿತಿ ಇರುತ್ತದೆ. ಪ್ರಕೃತಿಯು ಸಹ ಘನತೆಯಿಂದಲೇ ಇರುತ್ತದೆ. ಪಕ್ಷಿಗಳು, ವೃಕ್ಷಗಳು, ಫಲಗಳು, ಹೂಗಳು ಎಲ್ಲವೂ ಘನತೆಯಿಂದಲೇ ಇರುತ್ತವೆ. ಒಳ್ಳೆಯದು. ಇನ್ನೂ ಕೆಳಗೆ ಬಂದು ನಿಮ್ಮ ಪೂಜ್ಯ ಸ್ವರೂಪವನ್ನು ನೋಡಿಕೊಳ್ಳಿರಿ.

ನಿಮಗೆ ಪೂಜೆಯಾಗುತ್ತಿದೆ. ಡಬಲ್ ವಿದೇಶಿಯರು  ಪೂಜ್ಯರಾಗುತ್ತೀರಾ? ನೀವು ದೇವಿ ದೇವತೆಯರಾಗುವುದಿಲ್ಲವೇ? ದೇವಿಯರಲ್ಲಿ ಕೂಡ ಕಾಳಿ ರೂಪವಲ್ಲ. ಆದರೆ ದೇವತೆಯರ ಮಂದಿರಗಳನ್ನು ನೋಡಿರಿ. ನಿಮ್ಮ ಪೂಜ್ಯ ಸ್ವರೂಪಕ್ಕೆ ಎಷ್ಟು ರಾಯಲ್ಟಿ ಮತ್ತು ಪರ್ಸನಾಲಿಟಿ ಇದೆ. ವಿಗ್ರಹ ನಾಲ್ಕು ಹೆಜ್ಜೆ ಅಥವಾ ಐದು ಹೆಜ್ಜೆಗಳ ಎತ್ತರವಿರುತ್ತದೆ. ಅಷ್ಟೇ ಆಗಲಿ ಮಂದಿರವನ್ನು ಎಷ್ಟು ಎತ್ತರದಲ್ಲಿ ತಯಾರು ಮಾಡುತ್ತಾರೆ. ಇದೇ ಘನತೆ ಮತ್ತು ವ್ಯಕ್ತಿತ್ವವಾಗಿದೆ. ಈ ದಿನಗಳಲ್ಲಿ ಎಷ್ಟು ಪ್ರಧಾನಮಂತ್ರಿಯಾದರೂ,  ರಾಜನಾದರೂ ಅವರ ವಿಗ್ರಹವನ್ನು ಬಡಪಾಯಿಯಂತೆ ಬಿಸಿಲಿನಲ್ಲಿ ತಯಾರು ಮಾಡಿ ಇಡುತ್ತಿದ್ದಾರೆ ಆದರೆ ನಿಮ್ಮ ಪೂಜ್ಯ ಸ್ವರೂಪದ ಪರ್ಸನಾಲಿಟಿ ಎಷ್ಟು ಶ್ರೇಷ್ಠವಾಗಿದೆ. ಶ್ರೇಷ್ಠವೇ ತಾನೇ! ಕುಮಾರಿಯರು ಕುಳಿತುಕೊಂಡಿದ್ದೀರಲ್ಲವೇ!  ನಿಮ್ಮ ಘನತೆಯಯಲ್ಲವೇ. ಮತ್ತೆ ಅಂತಿಮದಲ್ಲಿಯೂ ಸಹ ಸಂಗಮ ಯುಗದಲ್ಲಿಯೂ ನಿಮ್ಮ ಘನತೆ ಎಷ್ಟು ಶ್ರೇಷ್ಠವಾದದ್ದು? ಬ್ರಾಹ್ಮಣ ಜೀವನದ ಪರ್ಸನಾಲಿಟಿ ಎಷ್ಟು ಶ್ರೇಷ್ಠವಾದದ್ದು? ಡೈರೆಕ್ಟ್ ಭಗವಂತನು ನಿಮ್ಮ ಬ್ರಾಹ್ಮಣ ಜೀವನದಲ್ಲಿ ರಾಯಲ್ಟಿ ಮತ್ತು ಪರ್ಸನಾಲಿಟಿಯನ್ನು ತುಂಬಿದ್ದಾರೆ. ಬ್ರಾಹ್ಮಣ ಜೀವನದ ಚಿತ್ರಕಾರನು ಯಾರು? ಸ್ವಯಂ ತಂದೆಯಾಗಿದ್ದಾರೆ. ಬ್ರಾಹ್ಮಣ ಜೀವನದ ಪರ್ಸನಾಲಿಟಿ, ರಾಯಲ್ಟಿ ಏನಾಗಿದೆ? ಪವಿತ್ರತೆಯೇ ರಾಯಲ್ಟಿ. ಹೌದಲ್ಲವೇ? ಇಲ್ಲಿ ಕುಳಿತಿರುವ ಬ್ರಾಹ್ಮಣಾತ್ಮರೆಲ್ಲರಿಗೂ ಪವಿತ್ರತೆಯ ರಾಯಲ್ಟಿ ಇದೆಯಲ್ಲವೇ? ಹೌದು ಎಂದು ಕೈಯನ್ನು ಅಲುಗಾಡಿಸಿರಿ. ಹಿಂದೆ ಕುಳಿತಿರುವವರು ಕೈಯನ್ನು ಎತ್ತುತ್ತಿದ್ದೀರಿ ನಿವು ಹಿಂದೆ ಇಲ್ಲ. ಎದುರಿಗೆ ಇದ್ದೀರಿ. ಹಿಂದೆ ಕುಳಿತಿರುವವರ ಮೇಲೆ ಸ್ವತಹವಾಗಿ ದೃಷ್ಟಿ ಹೋಗುತ್ತದೆ. ಮುಂದೆ ಕುಳಿತಿರುವವರನ್ನು  ಪ್ರತ್ಯೇಕವಾಗಿ ನೋಡಬೇಕಾಗುತ್ತದೆ. ಹಿಂದೆ ಕುಳಿತಿರುವವರು ಸ್ವತಹವಾಗಿ ಕಾಣಿಸುತ್ತಾರೆ. ಪವಿತ್ರತೆಯ ಪರ್ಸ್ನಾಲಿಟಿ ಸದಾ ಇರುತ್ತದೆಯೇ ಎಂದು ಪರಿಶೀಲನೆ ಮಾಡಿಕೊಳ್ಳಿ. ಮನಸಾ ವಾಚಾ, ಕರ್ಮಣಾ, ವೃತ್ತಿ, ದೃಷ್ಟಿ ಮತ್ತು ಕೃತಿ ಎಲ್ಲದರಲ್ಲೂ ಪವಿತ್ರತೆ ಇದೆಯೇ?

ಮನಸಾ ಪವಿತ್ರತೆ ಎಂದರೆ ಸದಾ ಮತ್ತು ಸರ್ವರ ಪ್ರತಿ ಶುಭ ಭಾವನೆ, ಶುಭಕಾಮನೆ ಇರಬೇಕು. ಆ ಆತ್ಮ ಹೇಗಿದ್ದರೂ ಪವಿತ್ರತೆಯ ಘನತೆ ಇರುವ ಮನಸ್ಸು ಅರ್ಥಾತ್ ಸರ್ವರ ಪ್ರತಿ ಶುಭ ಭಾವನೆ, ಶುಭಕಾಮನೆ, ಕಲ್ಯಾಣದ ಭಾವನೆ, ದಯಾ ಭಾವನೆ, ದಾತಾತನದ ಭಾವನೆ ಇರಬೇಕು. ದೃಷ್ಟಿಯಲ್ಲಿ ಸದಾ ಪ್ರತಿಯೊಬ್ಬರಲ್ಲಿ ಆತ್ಮಿಕ ಸ್ವರೂಪ ಕಾಣಿಸಬೇಕು ಅಥವಾ ಫರಿಶ್ತಾ ಸ್ವರೂಪವು ಕಾಣಿಸಬೇಕು. ಅವರು ಫರಿಶ್ತಾ ಆಗದೇ ಇದ್ದರೂ ನಮ್ಮ ದೃಷ್ಟಿಯಲ್ಲಿ ಫರಿಶ್ತಾ ಸ್ವರೂಪ ಮತ್ತು ಆತ್ಮಿಕ ಸ್ವರೂಪವೇ ಇರಬೇಕು.

ಕೃತಿ ಎಂದರೆ ಸಂಪರ್ಕದಲ್ಲಿ ಬರುವುದು, ಸಂಬಂಧದಲ್ಲಿ ಬರುವುದು. ಇದರಲ್ಲಿ ಸದಾ ಸರ್ವರಿಗೆ ಸ್ನೇಹವನ್ನು ಕೊಡಬೇಕು, ಸುಖವನ್ನು ಕೊಡಬೇಕು. ಇತರರು ಸ್ನೇಹವನ್ನು ಕೊಟ್ಟರೂ ಕೊಡದೇ ಇದ್ದರೂ ನನ್ನ ಕರ್ತವ್ಯ ಸ್ನೇಹವನ್ನು ಕೊಡಬೇಕು ಮತ್ತು ಸ್ನೇಹಿಯನ್ನಾಗಿ ಮಾಡಬೇಕು, ಸುಖವನ್ನು ಕೊಡಬೇಕು ಎಂದು ಭಾವಿಸಿರಿ. ಸೂಕ್ತಿ ಇದೆಯಲ್ಲವೇ ದುಃಖವನ್ನು ಕೊಡಬೇಡಿರಿ, ದುಃಖವನ್ನು ಪಡೆಯಬೇಡಿರಿ ಎಂದು. ಕೊಡಬಾರದು ಪಡೆಯಲೂಬಾರದು. ಕೊಡುವವರು ಯಾರಾದರೂ ನಿಮಗೆ ಒಂದು ವೇಳೆ ದುಃಖವನ್ನು ಕೊಟ್ಟರೂ ನೀವು ಸುಖದ ಸ್ವರೂಪದಲ್ಲಿಯೇ ನೋಡಿರಿ. ಬಿದ್ದಿರುವವರನ್ನು ಇನ್ನಷ್ಟು ಬೀಳಿಸಬಾರದು. ಬಿದ್ದಿರುವವರನ್ನು ಶ್ರೇಷ್ಠ ಸ್ಥಿತಿಗೆ ಕರೆದೊಯ್ಯಬೇಕು. ಅವರು ಪರವಶವಾಗಿ ದುಃಖವನ್ನು ಕೊಡುತ್ತಿದ್ದಾರೆ ಎಂದರೆ ಬಿದ್ದುಬಿಟ್ಟಿದ್ದಾರಲ್ಲವೇ! ಅವರನ್ನು ಇನ್ನೂ ಬೀಳಿಸಬಾರದು ಮತ್ತು ಅವರನ್ನು

ಸ್ನೇಹದಿಂದ, ಉನ್ನತವಾಗಿ ಮೇಲಕ್ಕೆ ಕರೆದೊಯ್ಯಬೇಕು ಇದರಲ್ಲಿಯೂ ಮೊದಲು ಮನೆಯಿಂದಲೇ ಉದ್ಧರಣೆಯನ್ನು ಪ್ರಾರಂಭಿಸಬೇಕು. ನಿಮ್ಮ ಸಹಯೋಗಿಗಳು ಸೇವಾ ಸಹಯೋಗಿಗಳನ್ನು ಬ್ರಾಹ್ಮಣ ಪರಿವಾರದ ಸಹಯೋಗಗಳನ್ನೆಲ್ಲಾ ಉನ್ನತರನ್ನಾಗಿ ತಯಾರು ಮಾಡಿರಿ. ಅವರು ತಮ್ಮ ಕೆಟ್ಟದ್ದನ್ನು ತೋರಿಸಿದರೂ ನೀವು ಅವರ ವಿಶೇಷತೆಗಳನ್ನೇ ನೋಡಿರಿ. ಎಲ್ಲರೂ ನಂಬರನ್ನು ಅನುಸರಿಸಿ ಇರುತ್ತಾರೆ. ಎಲ್ಲರೂ ಒಂದೇ ನಂಬರ್ ನಲ್ಲಿ ಇರುವುದಿಲ್ಲ ತಾನೆ? 108 ನಂಬರುಗಳಿವೆಯಲ್ಲವೇ? ಎಲ್ಲರೂ ನಂಬರ್‌ವಾರಾಗಿ ಇರುತ್ತಾರೆ. ಆದರೆ ನನ್ನ ಕರ್ತವ್ಯವೇನು? ನಾನು ಅಷ್ಟರತ್ನಗಳಲ್ಲಿ ಅಂತೂ ಬರುವುದಿಲ್ಲ ತಾನೆ! ಬಹುಶಃ 108ರಲ್ಲಿ ಬರುತ್ತೇನೆಯೋ ಏನೋ, ಬಂದರೂ 108ರಲ್ಲಿ ಎಲ್ಲೋ ಕೊನೆಗೆ ಬಂದರೆ ನನಗೂ ಸಹ ಸ್ವಲ್ಪ ಸಂಸ್ಕಾರಗಳು ಇರುತ್ತವೆ ಅಲ್ಲವೇ, ಎಂದು ಹೀಗೆ ಯೋಚಿಸಬಾರದು. ಇತರರಿಗೆ ಸುಖವನ್ನು ಕೊಡುತ್ತಾ, ಕೊಡುತ್ತಾ ಇದ್ದರೆ ನಿಮ್ಮ ಸಂಸ್ಕಾರವೂ ಸಹ ಸ್ನೇಹಿಯಾಗಿ, ಸುಖಿಯಾಗಿ ಬಿಡುತ್ತದೆ. ಇದು ಸಹ ಸೇವೆ. ಈ ಸೇವೆ ಮೊದಲು ಮನೆಯಿಂದಲೇ ಅರ್ಥಾತ್ ಬ್ರಾಹ್ಮಣ ಪರಿವಾರದಿಂದಲೇ ಪ್ರಾರಂಭಿಸಬೇಕು. ಬಾಪ್‌ದಾದಾರವರಿಗೆ ಇಂದು ಒಂದು ವಿಷಯದ ಬಗ್ಗೆ ನಗು ಬರುತ್ತಿದೆ ಹೇಳಬೇಕೇ? ಹೇಳಿದರೆ ನಿಮಗೂ ಸಹ ನಗು ಬರುತ್ತದೆ. ಬಾಪ್‌ದಾದಾ ಮಕ್ಕಳ ಆಟವನ್ನು ನೋಡುತ್ತಾ ಇರುತ್ತಾರೆ. ಒಂದು ಕ್ಷಣ ಯಾವಾಗಲಾದರೂ ಯಾವ ಸೇವಾಕೇಂದ್ರದ ಟಿ.ವಿಯನ್ನಾದರೂ ಬಾಪ್‌ದಾದಾ ನೋಡಿದಾಗ ಸೇವಾ ಕೇಂದ್ರದ ಟಿ.ವಿ, ಆಗಾಗ ವಿದೇಶದ ಟಿ.ವಿ, ಆಗಾಗ ಭಾರತವಾಸಿಯರ ಟಿ.ವಿಯನ್ನು ಸ್ವಿಚ್ ಆನ್ ಮಾಡುತ್ತಾರೆ. ಏನು ಮಾಡುತ್ತಿದ್ದಾರೆ ಎಂಬುದು ತಿಳಿಯುತ್ತದೆ. ಏಕೆಂದರೆ ಮಕ್ಕಳೆಲ್ಲರಿಗೂ ಇಷ್ಟವಲ್ಲವೇ, ಮಕ್ಕಳು ಸಹ ಸಮಾನರಾಗಲೇಬೇಕು ಎಂದು ಹೇಳುತ್ತಿದ್ದಾರೆ. ಪಕ್ಕಾನೆ ತಾನೇ? ಸಮಾನರಾಗಬೇಕು. ಕುಮಾರಿಯರು ಸಮಾನರಾಗಲೇಬೇಕು ಎಂದು ಕೊಳ್ಳುತ್ತಿದ್ದಾರೆ. ಅಥವಾ ಡ್ರಾಮದಲ್ಲಿ ಹೇಗಿದ್ದರೆ ಹಾಗೆ, ಹೇಗಾದರೂ ಪರವಾಗಿಲ್ಲ ಎಂದುಕೊಳ್ಳುತ್ತಿದ್ದೀರಾ? ಹಾಗಲ್ಲ, ಕುಮಾರಿಯರೆಲ್ಲರೂ ಸಮಾನರಾಗಲೇಬೇಕು. ಸಾಯಬೇಕಾಗಿ ಬಂದರೂ, ಏನು ಮಾಡಬೇಕಾಗಿ ಬಂದರೂ, ಸಮಾನರಾಗಲೇಬೇಕು. ಯೋಚಿಸಿಕೊಳ್ಳಿರಿ. ಯಾರಾದರೆ ಸಾಯಬೇಕಾಗಿ ಬಂದರೂ, ಬಾಗಬೇಕಾಗಿ ಬಂದರೂ, ಸಹಿಸಬೇಕಾಗಿ ಬಂದರೂ, ಅನೇಕ ವಿಷಯಗಳು ಕೇಳಬೇಕಾಗಿ ಬಂದರೂ ತಂದೆಯ ಸಮಾನರಾಗುತ್ತೇವೆ ಎಂಬುವರು ಕೈಯನ್ನು ಯೋಚಿಸಿಕೊಂಡು ಎತ್ತಿರಿ. ಇವರ ಫೋಟೋ ತೆಗೆಯಿರಿ. ಕುಮಾರಿಯರು ಬಹಳ ಜನರಿದ್ದಾರೆ. ಸಾಯಬೇಕಾಗಿ ಬರುತ್ತದೆ, ಬಾಗಬೇಕಾಗಿ ಬರುತ್ತದೆ, ಪಾಂಡವರು ಕೈಯನ್ನು ಎತ್ತಿರಿ. ಸಮಾನರಾಗಬೇಕು ಸಮಾನರಾಗದಿದ್ದರೆ ಮಜಾ ಬರುವುದಿಲ್ಲ, ಸಮೀಪವಾಗಿ ಇರಲಾಗುವುದಿಲ್ಲ, ಪೂಜೆಯಲ್ಲಿಯೂ ಸಹ ವ್ಯತ್ಯಾಸ ಬರುತ್ತದೆ. ಬ್ರಹ್ಮಾ ತಂದೆಯ ಮೇಲೆ ನಿಮಗೆ ಪ್ರೀತಿ ಇದೆ ಅಲ್ಲವೇ. ಡಬಲ್ ವಿದೇಶಿಯರಿಗೆ ಎಲ್ಲರಿಗಿಂತಲೂ ಹೆಚ್ಚು ಪ್ರೀತಿ ಇದೆ. ಯಾರಿಗಾದರೆ ಬ್ರಹ್ಮಾ ತಂದೆಯ ಮೇಲೆ ಹೃದಯಪೂರ್ವಕವಾದ ಪ್ರೀತಿ ಇದೆಯೋ ಅವರು ಕೈಯನ್ನು ಎತ್ತಿರಿ. ಡಬಲ್ ವಿದೇಶಿಯರಿಗೆ ಹೃದಯಪೂರ್ವಕವಾದ ಪ್ರೀತಿ ಇದೆಯೇ? ಒಳ್ಳೆಯದು. ಪಕ್ಕಾ ಪ್ರೀತಿ ಇದೆ ಅಲ್ಲವೇ, ಹಾಗಾದರೆ ಈಗ ಒಂದು ಪ್ರಶ್ನೆಯನ್ನು ಕೇಳುತ್ತೇನೆ.

ಯಾರೊಂದಿಗಾದರೆ ಪ್ರೀತಿ ಇರುತ್ತದೆಯೋ ಆ ಪ್ರೀತಿಯ ಗುರುತು ಅವರಿಗೆ ಯಾವುದಾದರೆ ಇಷ್ಟವೆನಿಸುತ್ತದೆಯೋ ಪ್ರೀತಿಸುವವರಿಗೂ ಸಹ ಅದೇ ಇಷ್ಟವೆನಿಸುತ್ತದೆ. ಇಬ್ಬರ ಸಂಸ್ಕಾರಗಳು, ಸ್ವಭಾವಗಳು, ಸಂಕಲ್ಪಗಳು ಬೆರೆತು ಹೋದಾಗಲೇ ಪ್ರಿಯವೆನಿಸುತ್ತಾರೆ. ಆದ್ದರಿಂದ ಬ್ರಹ್ಮಾ ತಂದೆಯೊಂದಿಗೆ ಪ್ರೀತಿ ಇದ್ದರೆ 21 ಜನ್ಮಗಳು ಮೊದಲ ಜನ್ಮದಿಂದ ಎರಡನೇ ಜನ್ಮದಲ್ಲಿ, ಮೂರನೇ ಜನ್ಮದಲ್ಲಿ ಬಂದರೆ ಚೆನ್ನಾಗಿರುವುದಿಲ್ಲ ಮೊದಲ

ಜನ್ಮದಿಂದ ಕಡೆಯ ಜನ್ಮದವರೆಗೂ ಭಿನ್ನ-ಭಿನ್ನ ರೂಪಗಳಲ್ಲಿ ಜೊತೆಯೇ ಇರುತ್ತೀರಿ. ಜೊತೆ ಇರಲು ಯಾರಿಗೆ ಆಗುತ್ತದೆ. ಯಾರಾದರೆ ಸಮಾನವಾಗಿ ತಯಾರಾಗುತ್ತಾರೆಯೋ ಅವರೇ ಜೊತೆ ಇರಬಲ್ಲರು. ಬ್ರಹ್ಮಾ ತಂದೆ ನಂಬರ್ ಒನ್ ಆತ್ಮ ಮತ್ತು ಬ್ರಹ್ಮಾ ತಂದೆಯ ಜೊತೆ ಯಾರು ಇರಬಲ್ಲರು? ನಂಬರ್ ಒನ್ ಆದಾಗಲೇ ಜೊತೆ ಇರಬಲ್ಲರು. ಎಲ್ಲದರಲ್ಲಿ ನಂಬರ್ ಒನ್ ಆಗಬೇಕು, ಮನಸ್ಸಿನಲ್ಲಿ, ವಾಚಾದಲ್ಲಿ, ಕರ್ಮಣಾದಲ್ಲಿ, ವೃತ್ತಿಯಲ್ಲಿ, ದೃಷ್ಟಿಯಲ್ಲಿ, ಕೃತಿಯಲ್ಲಿ ಎಲ್ಲದರಲ್ಲಿಯೂ ನಂಬರ್ ಒನ್ ಆಗಬೇಕು. ಆದ್ದರಿಂದ ನಂಬರ್‌ವನ್ನಾಗಿ ಇದ್ದೀರಾ ಅಥವಾ ನಂಬರ್‌ವಾರ್ ಆಗಿದ್ದೀರಾ? ಒಂದು ವೇಳೆ ನಿಮಗೆ ಪ್ರೀತಿ ಇದ್ದರೆ ಪ್ರೀತಿಗಾಗಿ ಏನನ್ನು ಬಲಿಹಾರ ಮಾಡಬೇಕಾದರೂ ಕಷ್ಟವೆನಿಸುವುದಿಲ್ಲ. ಕಡೆಯ ಜನ್ಮ ಕಲಿಯುಗದ ಅಂತಿಮದಲ್ಲಿ ದೇಹಾಬಿಮಾನದ ಪ್ರೀತಿ ಇರುವವರು ಪ್ರೀತಿಗಾಗಿ ಪ್ರಾಣವನ್ನು ಸಹ ಬಲಿಹಾರ ಮಾಡುತ್ತಿದ್ದಾರೆ. ನೀವು ಬ್ರಹ್ಮಾ ತಂದೆಯ ಮೇಲೆ ಪ್ರೀತಿಯಿಂದ ನಿಮ್ಮ ಸಂಸ್ಕಾರಗಳನ್ನು ಪರಿವರ್ತನೆ ಮಾಡಿಕೊಳ್ಳುವುದು, ಇದೇನಾದರೂ ದೊಡ್ಡ ವಿಷಯವೇ? ದೊಡ್ಡ ವಿಷಯವೇ? ಅಲ್ಲ. ಆದ್ದರಿಂದ ಇಂದಿನಿಂದ ಎಲ್ಲರ ಸಂಸ್ಕಾರಗಳು ಪರಿವರ್ತನೆ ಆಗಿಬಿಟ್ಟಿವೆಯೇ? ಪಕ್ಕಾ ಆಗಿದೆಯೇ? ಮತ್ತೆ ರಿಪೋರ್ಟ್ ಬರುತ್ತದೆ, ನಿಮ್ಮ ಸಹಯೋಗಿಗಳು ಬರೆಯುತ್ತಾರೆ. ಪಕ್ಕಾ ಆಗಿದೆಯೇ? ದಾದಿಯರು ಕೇಳುತ್ತಿದ್ದೀರಾ? ಸಂಸ್ಕಾರಗಳು ಬದಲಾಗುತ್ತಿವೆ ಎನ್ನುತ್ತಿದ್ದೀರಾ ಅಥವಾ ಸಮಯ ಹಿಡಿಸುತ್ತದೆಯೇ? ಮೋಹಿನಿ (ಅಕ್ಕನವರು) ಹೇಳಿರಿ? ಬದಲಾಗುತ್ತವೆ ಅಲ್ಲವೇ! ಎಲ್ಲರೂ ಬದಲಾಯಿಸಿಕೊಳ್ಳುತ್ತಾರೆ ಅಲ್ಲವೇ? ಅಮೆರಿಕಾದವರು ಬದಲಾಯಿಸಿಕೊಳ್ಳುತ್ತೀರಾ? ನಗು ಬರುವ ವಿಷಯದ ಬಗ್ಗೆ ಹೇಳಲಿಲ್ಲ- ಅದು ಹೇಳುತ್ತೇನೆ ನಗು ಬರುವ ವಿಷಯವೇನೆಂದರೆ- ಎಲ್ಲರೂ ಪುರುಷಾರ್ಥವನ್ನು ಬಹಳ ಮಾಡುತಿದ್ದೇವೆ ಎನ್ನುತ್ತಿದ್ದಾರೆ. ಬಾಪ್‌ದಾದಾರವರಿಗೆ ಸಹ ಅದನ್ನು ನೋಡಿ ದಯೆ ಸಹ ಬರುತ್ತಿದೆ. ಬಹಳ ಮಾಡುತ್ತಿದ್ದಾರೆ. ಆಗಾಗ ಬಹಳ ಶ್ರಮವನ್ನು ಸಹ ಮಾಡುತ್ತಿದ್ದಾರೆ ಮತ್ತು ಇನ್ನು ಏನೆನ್ನುತ್ತಿದ್ದಾರೆ ಎಂದರೆ ಏನು ಮಾಡುವುದು, ನಮ್ಮ ಸಂಸ್ಕಾರವೇ ಎಷ್ಟು ಎನ್ನುತ್ತಿದ್ದಾರೆ. ಸಂಸ್ಕಾರ ಎಂದು ಹೇಳಿ ತಮ್ಮನ್ನು ತಾವು ಹಗುರ ಮಾಡಿಕೊಳ್ಳುತ್ತಿದ್ದಾರೆ. ನೀವು ಇಂದು ಯಾವುದನ್ನಾದರೆ ನಿಮ್ಮ ಸಂಸ್ಕಾರ ಎನ್ನುತ್ತಿದ್ದೀರೋ ಅದು ನಿಮ್ಮ ಸಂಸ್ಕಾರವೇ? ಎಂದು ನೋಡಿಕೊಳ್ಳಿರಿ. ನೀವು ಆತ್ಮ, ಆತ್ಮನೇ ತಾನೇ? ದೇಹವಲ್ಲ ತಾನೇ? ಹಾಗಾದರೆ ಆತ್ಮನ ಸಂಸ್ಕಾರವೇನು, ಇಂದು ನೀವು ಯಾವುದನ್ನಾದರೆ ನನ್ನದು ಎನ್ನುತ್ತಿದ್ದೀರೋ, ಅದು ನಿಮ್ಮದೇ ಅಥವಾ ರಾವಣನದೇ? ಯಾರದು? ನಿಮ್ಮದಲ್ಲ ತಾನೇ, ಮತ್ತೆ ನನ್ನ ಸಂಸ್ಕಾರ ಎಂದು ಏಕೆ ಹೇಳುತ್ತಿದ್ದೀರಿ. ನನ್ನ ಸಂಸ್ಕಾರ ಇಷ್ಟೇ ಎಂದು ಹೇಳುತ್ತಿದ್ದೀರಲ್ಲವೇ. ಇಂದಿನಿಂದ ಇದು ನನ್ನ ಸಂಸ್ಕಾರ ಎಂದು ಹೇಳಬೇಡಿರಿ. ಆಗಾಗ ಗಾಳಿಗೆ ಅಲ್ಲಲ್ಲಿ ಇರುವ ಎಲ್ಲಾ ಕಸ ಹಾರಿ ಬರುತ್ತದೆಯಲ್ಲವೇ, ಹಾಗೆಯೇ ಈ ರಾವಣನ ವಸ್ತುಗಳು ಸಹ ನಮ್ಮ ಹತ್ತಿರಕ್ಕೆ ಬಂದು ಬಿಟ್ಟಿವೆ ಮತ್ತು ಅವುಗಳನ್ನು ನನ್ನವು ಎಂದು ಹೇಗೆ ಹೇಳುತ್ತಿದ್ದೀರಿ. ನಿಮ್ಮವೇ? ಅಲ್ಲ ತಾನೇ, ಆದ್ದರಿಂದ ಈಗಿನ್ನು ಹೀಗೆ ಹೇಳಬೇಡಿರಿ. ಯಾವಾಗ ನನ್ನದು ಎಂಬ ಮಾತು ಬರುತ್ತದೆಯೋ ಆಗ ನಾನು ಯಾರು, ನನ್ನ ಸಂಸ್ಕಾರವೇನು ಎಂಬುವುದನ್ನು ಸ್ಮೃತಿಯಲ್ಲಿಟ್ಟುಕೊಳ್ಳಿರಿ. ದೇಹಾಭಿಮಾನದಲ್ಲಿ ನನ್ನ ಸಂಸ್ಕಾರ ಎಂಬುವುದು ಬರುತ್ತದೆ ಆದರೆ ಆತ್ಮಭಿಮಾನಿ ಸ್ಥಿತಿಯಲ್ಲಿ ನನ್ನ ಸಂಸ್ಕಾರ ಎಂಬುವುದು ಇರುವುದಿಲ್ಲ ಆದರಿಂದ ಈಗ ಈ ಭಾಷೆಯನ್ನು ಸಹ ಪರಿವರ್ತನೆ ಮಾಡಿರಿ. ನನ್ನ ಸಂಸ್ಕಾರ ಎನ್ನುತ್ತಾ ಸೋಮಾರಿಯಾಗಿ ಬಿಡುತ್ತಿದ್ದೀರಿ. ನನ್ನ ಭಾವ ಅದು ಅಲ್ಲ ಆದರೆ ನನ್ನ ಸಂಸ್ಕಾರ ಎನ್ನುತ್ತಿದ್ದೀರಿ, ಒಳ್ಳೆಯದು. ಇನ್ನೊಂದು ಮಾತು ಏನೆನ್ನುತ್ತಿದ್ದೀರಿ ನನ್ನ ಸ್ವಭಾವ ಎನ್ನುತ್ತಿದ್ದೀರಿ ಈಗ ನನ್ನ ಸ್ವಭಾವ ಎಂಬ ಮಾತು ಎಷ್ಟೋ ಚೆನ್ನಾಗಿರುತ್ತದೆ. ಸ್ವ ಎಂದಾಗ ಸದಾ ಚೆನ್ನಾಗಿರುತ್ತದೆ. ನನ್ನ ಸ್ವಭಾವ ಎಂದರೆ ಸ್ವಯಂನ

ಭಾವ ಚೆನ್ನಾಗಿರುತ್ತದೆ, ಕೆಟ್ಟದಾಗಿರುವುದಿಲ್ಲ. ನನ್ನ ಸ್ವಭಾವ ನನ್ನ ಸಂಸ್ಕಾರ ಎಂದು ಯಾವ ಭಾಷೆಯನ್ನಾದರೆ ಬಳಸುತ್ತಿದ್ದೀರೋ ಅದನ್ನು ಬದಲಾಯಿಸಿಕೊಳ್ಳಿರಿ. ಯಾವಾಗ ನನ್ನದು ಎಂಬ ಮಾತು ಬರುತ್ತದೆಯೋ ಆಗ ನನ್ನ ನಿಜ ಸಂಸ್ಕಾರ ಏನು ಎಂಬುದನ್ನು ಸ್ಮೃತಿಯಲ್ಲಿ ತಂದುಕೊಳ್ಳಿರಿ. ನನ್ನ ಸಂಸ್ಕಾರ ಎಂದು ಯಾರು ಮಾತನಾಡುತ್ತಿದ್ದಾರೆ? ಆತ್ಮ ಮಾತನಾಡುತ್ತಿದೆಯೇ, ಹೀಗೆ ಯೋಚಿಸಿದಾಗ ನಿಮ್ಮ ಮೇಲೆ ನಿಮಗೆ ನಗು ಬರುತ್ತದೆ ಅಲ್ಲವೇ. ಬರುತ್ತದೆ ಅಲ್ಲವೇ ನಗು. ನಗು ಬಂದರೆ ಯಾವ ಜಗಳವನ್ನಾದರೆ ಆಡುತ್ತಿದ್ದೀರೋ ಅದು ಸಮಾಪ್ತಿಯಾಗಿ ಬಿಡುತ್ತದೆ. ಇದನ್ನೇ ಭಾಷೆಯನ್ನು ಬದಲಾಯಿಸುವುದು ಅರ್ಥಾತ್ ಪ್ರತಿಯೊಬ್ಬ ಆತ್ಮನ ಪ್ರತಿ ಸ್ವಮಾನ ಮತ್ತು ಸನ್ಮಾನ ಭಾವದಿಂದ ಇರುವುದು ಎನ್ನುತ್ತಾರೆ.

ಸ್ವಯಂ ಸಹ ಸದಾ ಸ್ವಮಾನದಲ್ಲಿ ಇರಿ ಮತ್ತು ಇತರರನ್ನು ಸಹ ಸ್ವಮಾನದಿಂದ ನೋಡಿರಿ. ಸ್ವಮಾನದಿಂದ ನೋಡಿದರೆ ನಿಮಗೆ ಇಷ್ಟವಿಲ್ಲದ ವಿಷಯಗಳು ಅರ್ಥಾತ್ ಆಗಾಗ ಯಾರಾದರೂ ಜಗಳವಾಡಿದರೆ ನಿಮಗೆ ಇಷ್ಟವೆನಿಸುತ್ತದೆಯೇ? ಇಷ್ಟವೆನಿಸುವುದಿಲ್ಲ ತಾನೇ ಆದ್ದರಿಂದ ಒಬ್ಬರನ್ನೊಬ್ಬರು ಸ್ವಮಾನದ ದೃಷ್ಟಿಯಿಂದ ನೋಡಿರಿ. ಇವರು ವಿಶೇಷ ಆತ್ಮ ಇವರು ತಂದೆಯ ಪಾಲನೆಯನ್ನು ಪಡೆದಿರುವ ಬ್ರಾಹ್ಮಣ ಆತ್ಮರು ಇವರು ಕೋಟಿಯಲ್ಲಿ ಕೆಲವರು ಹೀಗೆ ಸ್ವಮಾನದಿಂದ ನೋಡಬೇಕು.

ಕೇವಲ ಒಂದು ವಿಷಯವನ್ನು ಮಾಡಿರಿ- ನಿಮ್ಮ ನಯನಗಳಲ್ಲಿ ಬಿಂದುವನ್ನು ಸಮಾವೇಶಗೊಳಿಸಿಕೊಳ್ಳಿರಿ ಸಾಕು. 1.ಬಿಂದುವನ್ನು ನೋಡುತ್ತಿದ್ದೀರಿ, 2.ಬಿಂದುವನ್ನು ಸಮಾವೇಶಗೊಳಿಸಿರಿ. ಆಗ ಏನೂ ಆಗುವುದಿಲ್ಲ. ಶ್ರಮ ಮಾಡಬೇಕಾಗಿರುವ ಅವಶ್ಯಕತೆಯೂ ಇರುವುದಿಲ್ಲ. ಆತ್ಮ, ಆತ್ಮನನ್ನು ನೋಡುತ್ತಿದೆ, ಆತ್ಮನೊಂದಿಗೆ ಮಾತನಾಡುತ್ತಿದೆ. ಹೀಗೆ ಆತ್ಮಿಕ ವೃತ್ತಿ, ಆತ್ಮಿಕ ದೃಷ್ಟಿಯನ್ನು ತಯಾರು ಮಾಡಿಕೊಳ್ಳಿರಿ. ಏನು ಮಾಡಬೇಕು ಎಂದು ತಿಳಿಯಿತೇ? ಈಗಿನ್ನೂ ಯಾವಾಗಲೂ ನನ್ನ ಸಂಸ್ಕಾರ, ಸ್ವಭಾವ, ಅರ್ಥಾತ್ ಸ್ವಯಂನ ಭಾವದಲ್ಲಿ ಇರಬೇಕು. ಬಾಪ್‌ದಾದಾರವರ ಈ ಸೀಸನ್ ನ ಮೊದಲ ಟರ್ನ್ ನಲ್ಲಿ ನಿಮ್ಮೆಲ್ಲರ ಮೊದಲ ಟರ್ನಲ್ಲವೇ, ಹೇಗಾದರೆ ಮೊದಲ ಟರ್ನ್ ಪಡೆದಿದ್ದೀರೋ ಹಾಗೆಯೇ ಫಲಿತಾಂಶವೂ ಮೊದಲ ನಂಬರ್ ನಲ್ಲಿ ಕೊಡಬೇಕು. ಕೊಡಬೇಕಲ್ಲವೇ ಮತ್ತು ಡಬಲ್ ವಿದೇಶೀಯರಿಗೆ ಈ ವಿಶೇಷತೆ ಜನ್ಮದಿಂದಲೇ ಇದೆ. ಏನನ್ನು ಮಾಡಿದರೂ ಪಕ್ಕಾ ಆಗಿ ಮಾಡುತ್ತಾರೆ. ಹೌದೋ ಅಥವಾ ಇಲ್ಲವೋ? ಹೌದು ಅಥವಾ ಇಲ್ಲ ಎಂಬುದರ ಮಧ್ಯದಲ್ಲಿ ತೂಗಾಡುತ್ತಾ ಇರುವುದಲ್ಲ. ತಂದೆಗೆ ರಿಟರ್ನ್(ಹಿಂತಿರುಗಿ) ಕೊಡಬೇಕು. ಈ ಸೀಸನ್ ನಲ್ಲಿ ಪೂರ್ತಿ ಸೀಸನ್ ನಲ್ಲಿ ಇಂದಿನಿಂದ ಮೊದಲ ಅವಕಾಶ ಆದ್ದರಿಂದ ಬಾಪ್‌ದಾದಾ ಇದನ್ನೇ ಬಯಸುತ್ತಿದ್ದಾರೆ. ಈ ಪೂರ್ಣ ವರ್ಷದಲ್ಲಿ, ಸೀಸನ್ 6 ತಿಂಗಳು ನಡೆಯುತ್ತದೆ ಆದರೆ ಪೂರ್ಣವರ್ಷದಲ್ಲಿ ಯಾವಾಗ ಭೇಟಿ ಮಾಡಿದರೂ, ಯಾರನ್ನು ಭೇಟಿ ಮಾಡಿದರೂ, ಪರಸ್ಪರದಲ್ಲಿ ಆದರೂ, ಇತರ ಹೊರಗಡೆ ಇರುವ ಆತ್ಮರೊಂದಿಗಾದರೂ ಆಗಲಿ, ಯಾವಾಗ, ಎಲ್ಲಿ, ಯಾರನ್ನು ಭೇಟಿ ಮಾಡಿದರೂ ಅವರಿಗೆ ಸಂತುಷ್ಟತೆಯ ಸಹಯೋಗವನ್ನು ಕೊಡಿ.

ಸ್ವಯಂ ಸಂತುಷ್ಟವಾಗಿ ಇರಿ ಮತ್ತು ಇತರರನ್ನು ಸಹ ಸಂತುಷ್ಟ ಮಾಡಿರಿ. ಈ ಸೀಸನ್ನಿನ ಸ್ವಮಾನ - ಸಂತುಷ್ಟಮಣಿ. ಸದಾ ಸಂತುಷ್ಟ ಮಣಿ. ಅಣ್ಣಂದಿರು ಸಹ ಮಣಿ, ಅಷ್ಟೇ ಆಗಲಿ ಸಂತುಷ್ಟ ಮಣ ಅಥವಾ ಮಣರು ಎಂದು ಇರುವುದಿಲ್ಲ ತಾನೆ! ಮಣಿ ಅಷ್ಟೇ. ಒಬ್ಬಬ್ಬ ಆತ್ಮ ಪ್ರತಿ ಸಮಯ, ಸಂತುಷ್ಟ ಮಣಿಯಾಗಿ ಇರಬೇಕು ಮತ್ತು ಸ್ವಯಂ

ಸಂತುಷ್ಟವಾಗಿ ಇದ್ದರೆ ಇತರರನ್ನು ಸಹ ಸಂತುಷ್ಟರನ್ನಾಗಿ ಮಾಡಬಲ್ಲಿರಿ. ಸಂತುಷ್ಟವಾಗಿ ಇರಬೇಕು ಮತ್ತು ಸಂತುಷ್ಟ ಮಾಡಬೇಕು. ಇಷ್ಟವೇನಾ? ಕುಮಾರಿಯರಿಗೆ ಇಷ್ಟವೇನಾ? ಯಾರಿಗಾದರೆ ಇಷ್ಟವೆನಿಸುತ್ತದೆಯೋ ಅವರು ಮಾಡುತ್ತಾರೆ. ಕೇವಲ ಕೇಳುವುದು ಇಷ್ಟವೆನಿಸುವುದಿಲ್ಲ. ಯಾರಾದರೆ ಮಾಡುವುದನ್ನು ಇಷ್ಟಪಡುತ್ತಾರೆಯೋ ಅವರು ಕೈಯನ್ನು ಎತ್ತಿರಿ. ಬಹಳ ಒಳ್ಳೆಯದು, ಶುಭಾಶಯಗಳು. ಏನೇ ಆಗಲಿ, ಸ್ವಮಾನದ ಸೀಟ್ನ ಮೇಲೆ ಏಕಾಗ್ರವಾಗಿ ಇರಿ. ಭ್ರಮಿಸಬೇಡಿರಿ. ಆಗಾಗ ಒಂದು ಸೀಟ್ನ ಮೇಲೆ, ಆಗಾಗ ಇನ್ನೊಂದು ಸೀಟ್ನ ಮೇಲೆ  ಕುಳಿತುಕೊಳ್ಳಬೇಡಿರಿ. ನಿಮ್ಮ ಸ್ವಮಾನದ ಸೀಟ್ನ ಮೇಲೆ ಏಕಾಗ್ರವಾಗಿ ಇರಿ ಮತ್ತು ಏಕಾಗ್ರತೆಯ ಸೀಟ್ ನ ಮೇಲೆ ಸೆಟ್ಟಾಗಿ ಯಾವ ವಿಷಯ ಬಂದರೂ ಕಾರ್ಟೂನ್ ಶೋನಂತೆ ನೋಡಿರಿ. ಕಾರ್ಟೂನ್ ಶೋ ನೋಡುವುದು ಇಷ್ಟವಲ್ಲವೇ? ಸಿಂಹ ಬರುತ್ತದೆ, ಕುರಿ ಬರುತ್ತದೆ, ಏನೇ ಬಂದರೂ ಕಾರ್ಟೂನ್. ನಿಮ್ಮ ಸೀಟ್ನಿಂದ ಅಪ್ಸೆಟ್ ಆಗಬೇಡಿ ಆಗ ಮಜಾ ಬರುತ್ತದೆ. ಒಳ್ಳೆಯದು. ಸಿಂಹ ಬಂದರೂ, ನಾಯಿ ಕೂಡ ಬರುತ್ತದೆ ನೀವು ನೋಡುತ್ತಾ ಬಾಪ್‌ದಾದಾ ಸಹ ಹೇಳಿದ್ದರಲ್ಲವೇ- ನೀವೆಲ್ಲರೂ ಸ್ವಮಾನದ ಸೀಟ್ ನ ಮೇಲೆ ಸೆಟ್ಟಾಗಿ ಇದ್ದರೆ ಏರುಪೇರು ಆಗುವುದಿಲ್ಲ. ಸ್ವಮಾನದ ಗೌರವದಲ್ಲಿ ಇರುತ್ತಿಲ್ಲ ಆದ್ದರಿಂದಲೇ ಏರುಪೇರು ಆಗುತ್ತಿದ್ದೀರಿ. ಚಿಕ್ಕ ಪೇಪರ್ ಹುಲಿ ಅಂತಹ ಪರಿಸ್ಥಿತಿ ಬರುತ್ತದೆ ಅಷ್ಟೇ, ಏರುಪೇರಾಗಿ ಬಿಡುತ್ತಿದ್ದೀರಿ ಆದ್ದರಿಂದ ಈ ವರ್ಷ ಏಕಾಗ್ರವಾಗುವ ಸ್ವಮಾನದ ಸೀಟ್ನ ಮೇಲೆ ಇರಬೇಕು. ಹೀಗಿರಬೇಕು ಎಂದು ನನಗೆ ತಿಳಿದಿದೆ ಆದರೆ… ಕೇಳಿದ್ದೇನೆ ಆದರೆ….ಹೀಗೆ ಹೇಳಬಾರದು. ಆದರೆ ನಿಮ್ಮನ್ನು ನೀವು ಅಂಗೀಕರಿಸಿ(ಒಪ್ಪಿಕೊಂಡು)  ಏಕಾಗ್ರವಾಗಿ ಸೀಟ್ನ ಮೇಲೆ ಕುಳಿತುಕೊಳ್ಳಬೇಕು, ಒಪ್ಪಿಕೊಂಡು ನಡೆಯುತ್ತಿಲ್ಲ ಕೇವಲ ಕೇಳುತ್ತಿದ್ದೀರಿ, ತಿಳಿದುಕೊಳ್ಳುತ್ತಿದ್ದೀರಿ, ಸೀಟ್ನ ಮೇಲೆ ಸ್ವರೂಪರಾಗಿ ಕುಳಿತುಕೊಳ್ಳಿರಿ.

(ಹತ್ತು ವರ್ಷಗಳಿಂದ ಇರುವವರು ಕುಳಿತುಕೊಂಡಿದ್ದಾರೆ) ಇದು ಸಹ ಬಹಳ ಅದ್ಭುತ, 10 ವರ್ಷಗಳು ಅಮರವಾಗಿದ್ದೀರಿ. ಅಮರನಾಥ್ ತಂದೆಯಿಂದ ಅಮರ ಭವ!ದ ವರದಾನವು ಲಭಿಸಿದೆ. ಹತ್ತು ವರ್ಷದವರು ಕೈಯನ್ನು ಎತ್ತಿರಿ. 10 ವರ್ಷಗಳವರೆಗೆ ಬಾಪ್‌ದಾದಾ ನವರತ್ನಗಳ ಮಾಲೆಯನ್ನು ಹಾಕುತ್ತಿದ್ದಾರೆ. ನವರತ್ನಗಳು ನಿರ್ವಿಘ್ನರನ್ನಾಗಿ ಮಾಡುತ್ತವೆ.  ಅರ್ಥಾತ್ ಅಷ್ಟ ಶಕ್ತಿಗಳು ಮತ್ತು ತಂದೆ ಸದಾ ಸ್ಮೃತಿಯಲ್ಲಿ ಇರಬೇಕು. ಒಳ್ಳೆಯದು. ಇನ್ನು ಮುಂದೆ ಏನಾಗುತ್ತದೆ ಎಂದು ಯೋಚಿಸುತ್ತಿದ್ದೀರಾ? ಒಳ್ಳೆಯದು.  ಅಥವಾ ನಡೆಯಬಲ್ಲೆವೋ ಅಥವಾ ಇಲ್ಲವೋ ಎಂದು ಯೋಚಿಸುತ್ತಿದ್ದೀರಾ?  ಯಾರಾದರೆ ಅಂತಿಮದವರೆಗೆ ಜೊತೆಯೇ ಇರುತ್ತೇವೆ, ಅಮರವಾಗಿ ಇರುತ್ತೇವೆ, ಏನೇ ಆಗಲಿ ಹಿಮಾಲಯ ಪರ್ವತಗಳಂತಹ ಪರಿಸ್ಥಿತಿಗಳು ಬಂದರೂ ಪಕ್ಕಾ ಆಗಿ ಇರುತ್ತೇವೆ ಎನ್ನುವವರು ಕೈಯನ್ನು ಎತ್ತಿರಿ. ಬಹಳ ಒಳ್ಳೆಯದು, ನಾವು ಪಕ್ಕಾ ಎಂದು ಭಾವಿಸುತ್ತಿದ್ದೀರಾ? ಹತ್ತು ವರ್ಷದವರಿಗೆ ಮಾತ್ರ ಎಂದಲ್ಲ, ಆದರೆ ಎಲ್ಲರಿಗೂ ನಿಶ್ಚಯವಿರಬೇಕು. ಏನಾದರೂ ಆಗಲಿ ತಂದೆಯ ಜೊತೆಯೇ ಇರುತ್ತೇವೆ, ಜೊತೆಯೇ ನಡೆಯುತ್ತೇವೆ, ಜೊತೆಯೇ ರಾಜ್ಯದಲ್ಲಿ ಹೋಗುತ್ತೇವೆ ಎಂದು, ಪಕ್ಕಾನೇ ತಾನೇ! ಜೊತೆ ಇರುತ್ತೀರಲ್ಲವೇ? ತಂದೆಯನ್ನು ಒಬ್ಬಂಟಿಯನ್ನಾಗಿ ಬಿಟ್ಟು ಹೋಗಬಾರದು. ಒಂಟಿಯಾಗಿ ಹೋದರೆ ನಿಮಗೂ ಚೆನ್ನಾಗಿ ಅನಿಸುವುದಿಲ್ಲ, ತಂದೆಗೂ ಸಹ ಇಷ್ಟವೆನಿಸುವುದಿಲ್ಲ. ಆದ್ದರಿಂದ ತಂದೆಯನ್ನು ಬಿಡಬಾರದು.

ಯಾವುದಾದರೂ ವಿಷಯ ಬಂದಾಗ ನೀವು ಮನಸ್ಸಿನಿಂದ ತಂದೆ, ನನ್ನ ತಂದೆ (ಬಾಬಾ) ಎನ್ನಿರಿ. ತಂದೆಯು ಹಾಜರಾಗಿ ಬಿಡುತ್ತಾರೆ. ನಿಮ್ಮ ಸಮಸ್ಯೆಗಳನ್ನು ಪರಿಷ್ಕರಿಸುತ್ತಾರೆ. ಮನಸ್ಸಿನಿಂದ ಹೇಳಬೇಕು. ಇದು ಬಾಬಾ, ಇದನ್ನು ಮಾಡಿರಿ...ಹೀಗೆ ಮನಸ್ಸಿನಿಂದ ಹೇಳಿದರೆ ಬಂಧಿಯಾಗಿ ಇರುತ್ತಾರೆ. ಆದರೆ ಮನಸ್ಸಿನಿಂದ ಹೇಳಿರಿ ಅಷ್ಟೇ ಹೊರತು ಅವಸರದ ಸಮಯದಲ್ಲಿ ಸ್ಮೃತಿ ಮಾಡಿ ಆನಂತರ ಮರೆತು ಹೋಗಬೇಡಿರಿ. ಡಬಲ್ ವಿದೇಶೀಯರು ತಮ್ಮ ಭಾಗ್ಯವನ್ನು ನೋಡಿ ಖುಷಿಪಡುತ್ತಿದ್ದಾರೆ. ಮೊದಲ ಅವಕಾಶವೂ ಲಭಿಸಿದೆ ಮತ್ತು ವಿಶೇಷ ಅವಕಾಶವು ಲಭಿಸಿದೆ. ಪೂರ್ತಿ ಸೀಸನ್ ತಂದೆ ಹೇಳಿರುವುದನ್ನು ನಿಭಾಯಿಸುತ್ತೀರಿ ತಾನೇ! ಯೋಚಿಸುವವರಾಗಬಾರದು, ನಿಭಾಯಿಸುವವರಾಗಬೇಕು. ಯಾವಾಗ ನೀವು ನನ್ನ ಬಾಬಾ ಎಂದಿದ್ದೀರೋ, ಬಾಬಾ ಸಹ ನನ್ನ ಮಕ್ಕಳು ಎಂದಿದ್ದಾರೆ. ಪಕ್ಕಾ ವ್ಯಾಪಾರವಾಗಿದೆಯಲ್ಲವೇ, ದಾದಿಯರು ಚೆನ್ನಾಗಿ ಇದ್ದೀರಲ್ಲವೇ ವಿದೇಶಿಯರನ್ನು ನೋಡಿ ಆನಂದವೆನಿಸುತ್ತಿದೆಯಲ್ಲವೇ, ಬಹಳ ಆನಂದವೆನಿಸುತ್ತಿದೆ. ದಾದಾಗೂ ಸಹ ಉತ್ಸಾಹ ಬರುತ್ತಿದೆ.

ಒಂದು ವೇಳೆ ಏನಾದರೂ ಆದರೆ ದಾದಿ ಎಲ್ಲರನ್ನು ಇಲ್ಲೇ ಕುಳಿತುಕೊಳ್ಳಲು ಹೇಳುತ್ತಾರೆ. ಎಲ್ಲರೂ ಹಾಜರಾಗಿ ಇರುತ್ತೀರಾ ಅಥವಾ ಲಂಡನ್ ನಲ್ಲಿ ಡೈಮಂಡ್ ಹಾಲ್ ಏನಾಗುತ್ತದೆ ಎಂದು ಯೋಚಿಸುತ್ತೀರಾ? ಹಾಗೆ ಇರಬಾರದು. ಎಲ್ಲರೂ ಎವರ್ ರೆಡಿಯಾಗಿರಬೇಕು. ಒಂದು ವೇಳೆ ಬಾಪ್‌ದಾದಾ ಎಲ್ಲರನ್ನೂ ಬಂದು ಬಿಡಿ, ಏನನ್ನು ಯೋಚಿಸಬೇಡಿರಿ ಎಂದರೆ ಬಂದು ಬಿಡುತ್ತೀರಾ. (ಹಾಗೆಯೇ ಬಂದುಬಿಡುತ್ತೇವೆ ಎಂದು ಹೇಳಿದರು) ಒಳ್ಳೆಯದು. ಆ ದಿನವೂ ಬರುತ್ತದೆ. ಬಂದು ಬಿಡಿ ಎಂದು ತಂದೆಯಿಂದ ಆರ್ಡರ್ ಬರುತ್ತದೆ. ಏಕೆಂದರೆ ಬಾಪ್‌ದಾದಾರವರಿಗೆ ಮಕ್ಕಳೆಂದರೆ ಇಷ್ಟವಲ್ಲವೇ! ಬೇರೆ ಮಾಡುವುದಿಲ್ಲ, ಜೊತೆಯೇ ಕರೆದೊಯ್ಯುತ್ತಾರೆ. ಯಾರಾದರೆ ಪಕ್ಕಾ ಆಗಿರುತ್ತಾರೆಯೋ ಅವರೇ ಇರುತ್ತಾರೆ.

ಎಲ್ಲರೂ ನಿರ್ವಿಘ್ನವಾಗಿ ಬಿಟ್ಟಿದ್ದೀರಲ್ಲವೇ! ಈಗ ಯಾವುದೇ ಮೂಲೆಯಲ್ಲಿ ಯಾವ ವಿಘ್ನವೂ ಇಲ್ಲ ತಾನೇ? ಈಗ ಒಳಗಡೆ ಯಾವುದಾದರೂ ವಿಘ್ನವಿದೆಯೇ, ಇಲ್ಲ ತಾನೇ? ಎಲ್ಲರೂ ನಿರ್ವಿಘ್ನರೇ ತಾನೇ? ಇಂದು ಇಲ್ಲಿ ಎಲ್ಲವನ್ನು ಬಿಟ್ಟು ಹೋಗಬೇಕು. ಓಂ ಶಾಂತಿ ಭವನವಲ್ಲವೇ! ಓಂ ಶಾಂತಿ ಆಗಿಬಿಡುತ್ತವೆ. ಏನು ಮಾಡಬೇಕು? ಮುಳ್ಳುಗಳನ್ನು ತಕ್ಷಣವೇ ತೊಲಗಿಸಬೇಕು. ಒಂದು ವೇಳೆ ತೊಲಗಿಸದಿದ್ದರೆ ಕಾಲುಗಳನ್ನೇ ತೊಲಗಿಸಬೇಕಾಗಿ ಬರುತ್ತದೆ. ಹಾಗೆಯೇ ವಿಘ್ನವನ್ನು ತಕ್ಷಣವೇ ಸಮಾಪ್ತಿ ಮಾಡಿರಿ ನಿಮ್ಮ ವಾಸ್ತವಿಕ ಸಂಸ್ಕಾರಗಳನ್ನು ಪ್ರತ್ಯಕ್ಷ ಮಾಡಿರಿ.

**ನಾಲ್ಕೂ ಕಡೆ ಇರುವಂತಹ ರಾಜಕುಮಾರರಾದ ಮಕ್ಕಳಿಗೆ, ಸರ್ವಸ್ನೇಹಿ, ಸಹಯೋಗಿ, ಸಮಾನವಾಗುವ ಮಕ್ಕಳಿಗೆ, ಸದಾ ನಿಮ್ಮ ಶ್ರೇಷ್ಠ ಸ್ವಭಾವ ಮತ್ತು ಸಂಸ್ಕಾರವನ್ನು ಸ್ವರೂಪದಲ್ಲಿ ಪ್ರತ್ಯಕ್ಷ ಮಾಡುವ ಮಕ್ಕಳಿಗೆ, ಸದಾ ಸುಖ ಮತ್ತು ಸರ್ವರಿಗೆ ಸ್ನೇಹವನ್ನು ಕೊಡುವ ಮಕ್ಕಳಿಗೆ, ಸದಾ ಸಂತುಷ್ಟಮಣಿಯಾಗಿ ಸಂತುಷ್ಟತೆಯ ಕಿರಣಗಳನ್ನು ವ್ಯಾಪಿಸುವವರಿಗೆ, ಬಾಪ್‌ದಾದಾರವರ ಪ್ರಿಯಸ್ಮೃತಿಗಳು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 17-10-2003.

***ಈ ವರ್ಷ ಸಂತುಷ್ಟ ಮಣಿಯಾಗಿ ಸದಾ ಸಂತುಷ್ಟವಾಗಿ ಇರಬೇಕು ಮತ್ತು ಸರ್ವರನ್ನು ಸಂತುಷ್ಟ ಮಾಡಬೇಕು.***

ಸದಾ ಪರಿಶೀಲನೆ ಮಾಡಿಕೊಳ್ಳಿರಿ. ಎಷ್ಟು ಸಮಯ, ಎಷ್ಟು ಶಕ್ತಿಯಿಂದ ನಿಮ್ಮ ಕರ್ಮೇಂದ್ರಿಯಗಳ ಮೇಲೆ ಮನಸ್ಸು, ಬುದ್ಧಿ, ಸಂಸ್ಕಾರಗಳ ಮೇಲೆ ಈಗ ಅಧಿಕಾರಿಯಾಗುತ್ತಿರೋ ಅಷ್ಟೇ ಭವಿಷ್ಯದಲ್ಲಿ ರಾಜ್ಯಾಧಿಕಾರವು ಲಭಿಸುತ್ತದೆ. ಕೃತಿ ಎಂದರೆ ಸಂಪರ್ಕದಲ್ಲಿ ಬರುವುದು, ಸಂಬಂಧದಲ್ಲಿ ಬರುವುದು. ಇದರಲ್ಲಿ ಸದಾ ಸರ್ವರಿಗೆ ಸ್ನೇಹವನ್ನು ಕೊಡಬೇಕು. ಸುಖವನ್ನು ಕೊಡಬೇಕು. ಯಾವ ವಿಷಯಗಳಾದರೂ ಬಂದರೆ ನೀವು ಮನಸ್ಸಿನಿಂದ ಬಾಬಾ, ನನ್ನ ಬಾಬಾ ಎನ್ನಿರಿ. ಬಾಬಾ ಹಾಜರಾಗಿ ಬಿಡುತ್ತಾರೆ. ನಿಮ್ಮ ಸಮಸ್ಯೆಯನ್ನು ಪರಿಷ್ಕರಿಸುತ್ತಾರೆ. ಮನಸ್ಸಿನಿಂದ ಹೇಳಬೇಕು, ಎಲ್ಲರೂ ಎವರ್‌ರೆಡಿಯಾಗಿ ಇರಬೇಕು... ಒಂದು ವೇಳೆ ಬಾಪ್‌ದಾದಾ ಎಲ್ಲರೂ ಬಂದು ಬಿಡಿ, ಏನು ಯೋಚಿಸಬೇಡಿರಿ, ಸೇವೆಯ ಬಗ್ಗೆ, ಸೇವಾಕೇಂದ್ರದ ಬಗ್ಗೆ, ಸಹಯೋಗಿಗಳ ಬಗ್ಗೆ ಯಾವುದನ್ನು ಯೋಚಿಸಬೇಡಿರಿ ಬಂದುಬಿಡಿ ಎಂದರೆ ಬಂದು ಬಿಡುತ್ತೀರಾ? ಆ ದಿನವೂ ಬರುತ್ತದೆ. ಬಂದು ಬಿಡಿ ಎಂದು ಬಾಬಾರವರಿಂದ ಆರ್ಡರ್ ಬರುತ್ತದೆ. ಎನ್ನುತ್ತಾ ಹೃದಯರಾಮನಾದ ಬಾಪ್‌ದಾದಾ ತನ್ನ ಅತಿ ಪ್ರೀತಿಯ ಮಕ್ಕಳನ್ನು ನೋಡುತ್ತಾ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ರಾಜಕುಮಾರನು, ತಂದೆಗೆ ಅತಿ ಪ್ರಿಯವಾದವನು.

2. ನಾನು ಪರಮಾತ್ಮನ ಪ್ರೀತಿ ಮತ್ತು ಪಾಲನೆಗೆ ಅಧಿಕಾರಿಯಾಗಿದ್ದೇನೆ.

3. ನಾನು ಡಬಲ್ (ಈಗ ಮತ್ತು ಭವಿಷ್ಯತ್ತಿನಲ್ಲಿ) ರಾಜ್ಯಾಧಿಕಾರಿಯಾಗಿದ್ದೇನೆ.

4. ನಾನು ರಾಜಯೋಗಿ.

5. ನಾನು ಒಂದು ಜನ್ಮದಲ್ಲಿ ಸದಾ ಸ್ವರಾಜ್ಯಾಧಿಕಾರಿ(ಮನಸ್ಸು, ಬುದ್ಧಿ, ಸಂಸ್ಕಾರಗಳ) ಮೇಲೆ ಆಗಿ 21 ಜನ್ಮಗಳ ರಾಜ್ಯಾಧಿಕಾರಿ ಆಗಿದ್ದೇನೆ.

6. ನಾನು ನನ್ನ ಅನಾದಿ (ಪರಮಧಾಮದಲ್ಲಿ) ಆದಿ(ಸತ್ಯಯುಗದಲ್ಲಿ ದೇವತಾ ರೂಪದಲ್ಲಿ) ಸಂಗಮಯುಗದಲ್ಲಿ (ಬ್ರಾಹ್ಮಣ ಜೀವನದಲ್ಲಿ) ನನ್ನ ಪರ್ಸನಾಲಿಟಿ ಮತ್ತು ರಾಯಲ್ಟಿ ಶ್ರೇಷ್ಠವಾದದ್ದು.

7. ಸ್ವಯಂ ತಂದೆಯೇ ನನ್ನಲ್ಲಿ ಪವಿತ್ರತೆಯ ಪರ್ಸನಾಲಿಟಿ ಮತ್ತು ರಾಯಲ್ಟಿಯನ್ನು ತುಂಬಿದ್ದಾರೆ.

8. ನನ್ನಲ್ಲಿ ಮನಸ್ಸಾದ ಮೂಲಕ ಸರ್ವರ ಪ್ರತಿ ಶುಭ ಭಾವನೆ, ಶುಭಕಾಮನೆ, ಕಲ್ಯಾಣದ ಭಾವನೆ, ದಯಾ ಭಾವನೆ, ದಾತಾತನದ ಭಾವನೆ ಇದೆ. ದೃಷ್ಟಿಯಲ್ಲಿ ಫರಿಶ್ತಾ ಮತ್ತು ಆತ್ಮಿಕ ಸ್ವರೂಪವಿದೆ. ನಾನು ಕೃತಿಯಲ್ಲಿ ಸಂಭಂಧ ಸಂಪರ್ಕದಲ್ಲಿ ಸರ್ವರಿಗೆ ಸ್ನೇಹವನ್ನು ಕೊಟ್ಟು ಸ್ನೇಹೀಯಾನ್ನಾಗಿ ಮಾಡಿ ಸುಖವನ್ನು ಕೊಡುತ್ತಿದ್ದೇನೆ.

9. ನನಗೆ ಯಾರಾದರೂ, ಯಾವಾಗಲೂ ದುಃಖವನ್ನು ಕೊಟ್ಟರೂ ನಾನು ಸುಖದ ಸ್ವರೂಪದಲ್ಲಿಯೇ ಅವರನ್ನು ನೋಡಿ ಅವರನ್ನು ಸ್ನೇಹದಿಂದ ಶ್ರೇಷ್ಠವಾದ (ಉನ್ನತ) ಸ್ಥಿತಿಗೆ ಕರೆದೊಯ್ಯುತ್ತಿದ್ದೇನೆ ಮತ್ತು ಅವರು ತಮ್ಮ ಕೆಟ್ಟದ್ದನ್ನು ತೋರಿಸಿದರೂ ನಾನು ಅವರ ವಿಶೇಷತೆಯನ್ನೇ ನೋಡುತ್ತಿದ್ದೇನೆ.

10. ನಾನು ಇತರರಿಗೆ ಸುಖವನ್ನು ಕೊಡುತ್ತಾ ಕೊಡುತ್ತಾ ನನ್ನ ಸಂಸ್ಕಾರವೂ ಸ್ನೇಹಿಯಾಗಿ, ಸುಖಿಯಾಗಿಬಿಟ್ಟಿದೆ.

11. ನಾನು ಮನಸ್ಸಿನಲ್ಲಿ, ವಾಚಾದಲ್ಲಿ, ಕರ್ಮಣಾದಲ್ಲಿ, ವೃತ್ತಿಯಲ್ಲಿ, ದೃಷ್ಟಿಯಲ್ಲಿ, ಕೃತಿಯಲ್ಲಿ ಬ್ರಹ್ಮಾ ತಂದೆಯ ಸಮಾನವಾಗಿ ನಂಬರ್ ಒನ್ ಆಗಿ ತಂದೆಯ ಜೊತೆ ಹೋಗುತ್ತೇನೆ.

12. ಯಾವಾಗಲಾದರೂ ನನ್ನದು ಎಂಬ ಮಾತು ಬಂದರೆ ನಾನು ಯಾರು, ನನ್ನ ಸಂಸ್ಕಾರವೇನು ಎಂಬುದನ್ನು ಸ್ಮೃತಿಯಲ್ಲಿಟ್ಟುಕೊಳ್ಳುತ್ತಿದ್ದೇನೆ.

13. ಇತರರನ್ನು "ಇವರು ವಿಶೇಷ ಆತ್ಮರು, ಇವರು ತಂದೆಯ ಪಾಲನೆಯನ್ನು ಪಡೆದಿರುವ ಬ್ರಾಹ್ಮಣಾತ್ಮರು, ಇವರು ಕೋಟಿಯಲ್ಲಿ ಕೆಲವರು, ಕೆಲವರಲ್ಲಿ ಒಬ್ಬ ಆತ್ಮ" ಹೀಗೆ ಸ್ವಮಾನದ ದೃಷ್ಟಿಯಿಂದ ನೋಡುತ್ತಿದ್ದೇನೆ.

14. ನಾನು ಆತ್ಮ, ಆತ್ಮನನ್ನು ನೋಡುತ್ತಿದ್ದೇನೆ, ಆತ್ಮನೊಂದಿಗೆ ಮಾತನಾಡುತ್ತಿದ್ದೇನೆ. ಹೀಗೆ ಆತ್ಮಿಕ ವೃತ್ತಿ, ಆತ್ಮಿಕ ದೃಷ್ಟಿಯನ್ನು ತಯಾರು ಮಾಡಿಕೊಂಡಿದ್ದೇನೆ.

15. ನಾನು ಸಂತುಷ್ಟವಾಗಿದ್ದು ಇತರರನ್ನು ಸಹ ಸಂತುಷ್ಟರನ್ನಾಗಿ ಮಾಡುವ ಸಂತುಷ್ಟಮಣಿ

16. ನಾನು ಸ್ವಮಾನದ ಸೀಟ್ ನ ಮೇಲೆ ಏಕಾಗ್ರವಾಗಿದ್ದು ಯಾವ ವಿಷಯ (ಸಿಂಹ, ಆಡು,  ನಾಯಿ, ಬೆಕ್ಕು) ಬಂದರೂ ಕಾರ್ಟೂನ್ ನ ಶೋನಂತೆ ನೋಡುವ ಮಹಾವೀರನು .

17. ನನಗೆ ಅಮರನಾಥನಾದ ತಂದೆಯಿಂದ ಅಮರ ಭವ!ದ ವರದಾನವು ಲಭಿಸಿದೆ.

18. ಏನೇ ಆದರೂ ನಾನು ತಂದೆಯ ಜೊತೆಯೇ ಇರುತ್ತೇನೆ, ಜೊತೆಯೇ ನಡೆಯುತ್ತೇನೆ.

19. ಯಾವುದಾದರೂ ವಿಷಯ ಬಂದರೆ ನಾನು ಮನಸ್ಸಿನಿಂದ ಬಾಬಾ, ನನ್ನ ಬಾಬಾ ಎಂದಾಕ್ಷಣ ತಂದೆಯು ಹಾಜರಾಗಿ ನನ್ನ ಸಮಸ್ಯೆಯನ್ನು ಪರಿಷ್ಕರಿಸಿದ್ದಾರೆ.

20. ನಾನು ಯೋಚಿಸುವವನಾಗದೆ ನಿಭಾಯಿಸುವವನಾಗಿದ್ದೇನೆ.

21. ತಂದೆಯು ಬಂದುಬಿಡಿ ಎಂದು ಆರ್ಡರ್ ಕೊಟ್ಟಾಕ್ಷಣ ತಂದೆಯ ಜೊತೆ ಹೋಗುವಂತೆ ನಾನು ಎವರ್ರೆಡಿಯಾಗಿದ್ದೇನೆ.

22. ನಾನು ನಿರ್ವಿಘ್ನವಾಗಿ ನನ್ನ ಸ್ವಾಭಾವಿಕ ಸಂಸ್ಕಾರಗಳನ್ನು ಪ್ರತ್ಯಕ್ಷ ಮಾಡಿದ್ದೇನೆ.